ಧಾರವಾಡ * ಕಾರವಾರ * ಹಾವೇರಿ * ಕೊಪ್ಪಳ * ಬಳ್ಳಾರಿ * ಬಾಗಲಕೋಟ * ವಿಜಯನಗರ * ಗದಗದಿಂದ ಏಕ ಕಾಲಕ್ಕೆ ಒಂದೇ ಸಂಚಿಕೆ ಪ್ರಕಟಗೊಳ್ಳುವ ದಿನ ಪತ್ರಿಕೆ



# ಸ್ನೇಹ ಜೀವಿ

ಉತ್ತರ ಕರ್ನಾಟಕದ ಧ್ವನಿ...!

SNEHAJEEVI KANNADA DAILY

ಕನ್ನಡ ದಿನಪತ್ರಿಕೆ




ಡಾ. ಎ.ಎನ್. ಶಾಲಗಾರ ಸಾರಥ್ಯದಲ್ಲಿ | MAG: PRBCR-10/2016-17 | Mob: 94827 70999 | e-mail: snehajeevidaily@gmail.com | Editor: Dr. A.N. Shalagar

RNI NO. KARKAN/2013/49379 | Volume / ಸಂಪುಟ : 14| Issue / ಸಂಚಿಕೆ : 250 | Date : 17-11-2025 | ಸೋಮವಾರ | Page / ಪುಟ : 4 | ಗದಗ–GADAG | Rs. 2/-

ಪುಟ -2 ಪ್ರಕೃತಿ ಚಿಕಿತ್ಸೆ ಔಷಧ ರಹಿತ ಚಿಕಿತ್ಸಾ ಪದ್ಧತಿ : ಡಾ.ಪಾಟೀಲ

ಪುಟ -3 ಸೈನಿಕ ಸಮುದಾಯ ಭವನ, ತರಬೇತಿ ಕೇಂದ್ರ ರಾಜ್ಯಕ್ಕೆ ಮಾದರಿ

# ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ?:

## ದೆಹಲಿಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಪ್ರತಿಕ್ರಿಯೆ!




❑ ಸ್ನೇಹಜೀವಿ ನ್ಯೂಸ್

**ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿಸಿಎಂ ಡಿಕೆ ಶಿವಕುಮಾರ್ ರಾಜಿನಾಮೆ ನೀಡಿದ್ದೀರಾ ಎಂಬ ಸುದ್ದಿ ಹರಿದಾಡುತ್ತಿದೆ. ಈ ಬಗ್ಗೆ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ನಾನು ಪಕ್ಷದ ಶಿಸ್ತಿನ ಸಿಪಾಯಿ.**



ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿಸಿಎಂ ಡಿಕೆ ಶಿವಕುಮಾರ್ ರಾಜಿನಾಮೆ ನೀಡಿದ್ದೀರಾ ಎಂಬ ಸುದ್ದಿ ಹರಿದಾಡುತ್ತಿದೆ. ಈ ಬಗ್ಗೆ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ನಾನು ಪಕ್ಷದ ಶಿಸ್ತಿನ ಸಿಪಾಯಿ. ಯಾವತ್ತೂ ಕಾಂಗ್ರೆಸ್ ಪಕ್ಷಕ್ಕೆ ಬ್ಲಾಕ್ ಮೇಲ್ ಮಾಡುವವನಲ್ಲ. ನಾನು ಹಗಲು ರಾತ್ರಿ ದುಡಿದು ಪಕ್ಷ ಕಟ್ಟಿದ್ದೇನೆ. ಮುಂದೆಯೂ ಕಟ್ಟುತ್ತೇನೆ ಎಂದು ಹೇಳಿದ್ದಾರೆ.

ಡಿಸೆಂಬರ್ ಒಳಗೆ ಕಾಂಗ್ರೆಸ್ ಕಚೇ–ರಿಗೆ ಭೂಮಿಪೂಜೆ ಮಾಡಲೇಬೇಕು. ಅದಕ್ಕೆ ನಾನು ದಿನಾಂಕ ನಿಗದಿ ಮಾಡಬೇಕಿದೆ. ಹೀಗಾಗಿ ನಮ್ಮ ಅಧ್ಯಕ್ಷರನ್ನು ಭೇಟಿ ಮಾಡಲು ಹೋಗುತ್ತಿದ್ದೇನೆ. ಡಿ ಸ ಂ ಬ ರ್ ತಿಂಗಳೊಳಗೆ ನೂರು ಕಾಂಗ್ರೆಸ್ ಕಚೇರಿಗಳಿಗೆ ಶಂಕುಸ್ಥಾಪನೆ ಮಾಡಲೇಬೇಕಾಗಿದೆ. ಕಾಂಗ್ರೆಸ್ ಸಂಸ್ಥಾಪನಾ ದಿನ ಆಚರಣೆ ಮಾಡಬೇಕು. ಇದೆಲ್ಲವನ್ನು ಯಾರು ಮಾಡಬೇಕು? ನಾನೇ ಮಾಡಬೇಕು. ನಾನೇಕೆ ರಾಜಿನಾಮೆ ನೀಡಲಿ. ಈಗ ಅಂತಹ ಸಂದರ್ಭವಿಲ್ಲ. ನಾನು ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡಿಕೊಂಡು ಹೋಗುತ್ತೇನೆ. ಮುಂದೆಯೂ ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸುತ್ತೇನೆ ಎಂದು ಸ್ಪಷ್ಟಪಡಿಸಿದರು.

## ಬಿಹಾರ ಸಿಎಂ ಆಗಿ ನಿತೀಶ್‌ಗೆ ಮತ್ತೆ ಪಟ್ಟ?; ಬಿಜೆಪಿ–ಎಲ್‌ಜೆಪಿಗೆ ಡಿಸಿಎಂ ಸ್ಥಾನ!

❑ ಸ್ನೇಹಜೀವಿ ನ್ಯೂಸ್

ಪಾಟ್ನಾ, ಬಿಹಾರ: ಬಹುನಿರೀಕ್ಷಿತ ಬಿಹಾರ ಚುನಾವಣೆ ಮುಕ್ತಾಯಗೊಂಡಿದೆ. ಎನ್‌ಡಿಎ ಮೈತ್ರಿಕೂಟ ಎದುರಾಳಿ ಪಕ್ಷಗಳನ್ನ ಧೂಳಿಪಟ ಮಾಡಿ ಗೆಲುವು ಸಾಧಿಸಿದೆ. ಮಹಾಘಟಬಂಧನ ಮೈತ್ರಿಕೂಟದವಿರುದ್ಧ ದ್ವಿಶತಕ ಭಾರಿಸುವ ಮೂಲಕ ಮೋಡಿ ಮಾಡಿದೆ. ಅಭೂತಪೂರ್ವ ಗೆಲುವು ಸಾಧಿಸುವ ಮೂಲಕ ಎನ್‌ಡಿಎ ಮೈತ್ರಿಕೂಟ ಮತ್ತೆ ಬಿಹಾರದ ಗದ್ದುಗೆ ಹಿಡಿದು ಅಧಿಕಾರ ನಡೆಸಲಿದ. ಸದ್ಯ ಬಿಹಾರದಲ್ಲಿ ಸರ್ಕಾರ ರಚನೆ ಕಸರತ್ತು ಆರಂಭವಾಗಿದೆ. ಈ ಕುರಿತ ವರದಿ ಇಲ್ಲಿದೆ.

**ನಿತೀಶ್ ಕುಮಾರ್‌ಗೆ ಮತ್ತೆ ಸಿಎಂ ಪಟ್ಟ!**

ಜೆಡಿಯು ಪಕ್ಷ ನಾಯಕ ನಿತೀಶ್ ಕುಮಾರ್ ಅವರು ಬಿಹಾರದ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಹೇಳಲಾಗ್ತಿದೆ. ಮೂಲಗಳ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ನಿತೀಶ್ ಕುಮಾರ್ ಅವರು ಮತ್ತೆ ಬಿಹಾರದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ.

**ಬಿಜೆಪಿ–ಎಲ್‌ಜೆಪಿಗೆ ಡಿಸಿಎಂ ಸ್ಥಾನ:**

ಬಿಹಾರ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಹೆಚ್ಚು ಸ್ಥಾನಗಳನ್ನ ಗೆಲ್ಲುವ ಮೂಲಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಆದರೆ, ಜೆಡಿಯುಗೆ ಸಿಎಂ ಸ್ಥಾನ ಬಿಟ್ಟುಕೊಟ್ಟು ಸುಭದ್ರ ಸರ್ಕಾರವನ್ನ ರಚಿಸಲು ಮುಂದಾಗಿದೆ. ಜೊತೆಗೆ ಚುನಾವಣೆಗೂ ಮುನ್ನ ಸೀಟ್ ಹಂಚಿಕೆಯ ವೇಳೆ ರೂಪಿಸಿದ್ದ ತಂತ್ರವನ್ನೇ ಅಧಿಕಾರ ಹಂಚಿಕೆಯಲ್ಲೂ ಅಳವಡಿಸಿಕೊಳ್ಳಲು ಮುಂದಾಗಿದ್ದು, ಬಿಜೆಪಿ ಮತ್ತು ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷಕ್ಕೆ ತಲಾ ಒಂದೊಂದು ಡಿಸಿಎಂ ಸ್ಥಾನ ಕೊಡಲು ನಿರ್ಧರಿಸಿದ್ದಾರೆ ಎಂದು ಹೇಳಲಾಗ್ತಿದೆ.

ಟಿಕೆಟ್ ಹಂಚಿಕೆಯ ವೇಳೆ ಎನ್‌ಡಿಎ ಮೈತ್ರಿಕೂಟ ಪ್ರತಿ ಸಂಸದರಿಗೆ ಐದಾರು ಕ್ಷೇತ್ರಗಳನ್ನ ಹಂಚಲಾಗಿತ್ತು, ಇದೀಗ ಅಧಿಕಾರ ಹಂಚಿಕೆಯ ವೇಳೆ ಕೂಡ ಅದೇ ತಂತ್ರವನ್ನೇ ಮುಂದುವರಿಸಲು ತೀರ್ಮಾನಿಸಿದ್ದಾರೆ. ಉದಾಹರಣೆಗೆ 84 ಸ್ಥಾನವನ್ನ ಗೆದ್ದಿರುವ ಜೆಡಿಯು ಪಕ್ಷ ಕ್ಯಾಬಿನೆಟ್ ರಚನೆ ವೇಳೆ



14 ಸಚಿವ ಸ್ಥಾನವನ್ನ ಪಡೆಯಲಿದೆ.

ನಿತೀಶ್ ಕುಮಾರ್ ಭೇಟಿಯಾದ ಚಿರಾಗ್ ಪಾಸ್ವಾನ್:2025ರ ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಿದ ಸಂಭ್ರಮದಲ್ಲಿದ್ದು, ನಿತೀಶ್ ಕುಮಾರ್ ಅವರನ್ನ ಲೋಕ ಜನಶಕ್ತಿ ಪಕ್ಷದ ನಾಯಕ ಚಿರಾಗ್ ಪಾಸ್ವಾನ್ ಭೇಟಿಯಾಗಿ ಶುಭಾಶಯ ಕೋರಿದ್ದಾರೆ. ಭೇಟಿಯಾದ ಸಂದರ್ಭದಲ್ಲಿ ಕೆಲ ಮಹತ್ವದ ಚರ್ಚೆ ನಡೆಸಿದ್ದಾರೆ ಎಂದು ಹೇಳಲಾಗ್ತಿದೆ. ನಿತೀಶ್ ಕುಮಾರ್ ಅವರನ್ನ ಭೇಟಿಯಾದ ಬಳಿಕ ಮಾತನಾಡಿದ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್, ನಿತೀಶ್ ಕುಮಾರ್ ಅವರ ಗೆಲುವಿಗೆ ನಾನು ಅಭಿನಂದನೆ ಸಲ್ಲಿಸಿದ್ದೇನೆ, ಎನ್‌ಡಿಎ ಗೆಲುವು ಜೆಡಿಯು–ಎಲ್‌ಜೆಪಿ ಪಕ್ಷದ ಮಧ್ಯೆ ಬಿರುಕು ಉಂಟಾಗಿದೆ ಎಂದು ವಿರೋಧ ಪಕ್ಷಗಳು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಚುನಾವಣೆ ಪ್ರಚಾರದ ಸಂದರ್ಭದಲ್ಲಿ ನಿತೀಶ್ ಕುಮಾರ್ ಅವರು ನಮ್ಮ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಿದ್ದರು, ನಾವು ಸಹ ಪ್ರತಿಯಾಗಿ ಜೆಡಿಯು ಪಕ್ಷದ ಅಭ್ಯರ್ಥಿಗೆ ಬೆಂಬಲ ಸೂಚಿಸಿದ್ದೇವು ಎಂದು ಹೇಳಿದರು.



### ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆ-ಜನಜಾಗೃತಿ

# ಪ್ರಕೃತಿ ಚಿಕಿತ್ಸೆ ಔಷಧ ರಹಿತ ಚಿಕಿತ್ಸಾ ಪದ್ಧತಿ : ಡಾ.ಪಾಟೀಲ



❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಪ್ರಕೃತಿ ಚಿಕಿತ್ಸೆಯು ಭಾರತೀಯ ಸಂಸ್ಕೃತಿಯ ಮೂಲಾಧಾರಗಳ ಮೇಲೆ ನಿಂತಿರುವ ಔಷಧ ರಹಿತ ಚಿಕಿತ್ಸಾ ಪದ್ಧತಿಯಾಗಿದ್ದು, ದೇಶಿಯ ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆಯಾದ ಆಯುಷ್‌ನಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ ಎಂದು ಡಾ.ಕಾಡಗೌಡ ಪಾಟೀಲ ಹೇಳಿದರು.

ಅವರು ಶನಿವಾರ ಗದುಗಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಪ್ರಾಂಗಣದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ (ರಿ) ಗದಗ, ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನಗಳ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಆಶ್ರಯದಲ್ಲಿ ಎರ್ಪಡಿಸಿದ್ದ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆಯ ಅಂಗವಾಗಿ ಜನಜಾಗೃತಿ ಕಾರ್ಯಕ್ರಮ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪ್ರಕೃತಿ ಚಿಕಿತ್ಸಾ ಪದ್ಧತಿಯಲ್ಲಿ ಯಾವುದೇ ರಾಸಾಯನಿಕ ಔಷಧಿಯನ್ನು ಉಪಯೋಗಿಸದೇ ಶರೀರದಲ್ಲಿರುವ ಜೀವ ಚೈತನ್ಯವನ್ನು ವಿವಿಧ ರೀತಿಯ ನೈಸರ್ಗಿಕ ಚಿಕಿತ್ಸೆಗಳ ಮೂಲಕ ಉತ್ತೇಜಿಸಲಾಗುತ್ತದೆ. ಆರೋಗ್ಯದ ಮೇಲೆ ಅಸಮತೋಲನದಿಂದಾಗಿ ಉಂಟಾಗುವ ಕಾಯಿಲೆಗೆ ಪಂಚಮಹಾಭೂತಗಳನ್ನೇ ಉಪಯೋಗಿಸಿ ವಿವಿಧ ಚಿಕಿತ್ಸೆಗಳ ಮೂಲಕ ದೇಹದಿಂದ ವಿಷಪದಾರ್ಥಗಳನ್ನು ಹೊರಹಾಕಿ ರೋಗ ರುಜಿನುಗಳನ್ನು ಮೂಲದಿಂದಲೇ ನಿರ್ಮೂಲನೆ ಮಾಡುವುದೇ ಪ್ರಕೃತಿ ಚಿಕಿತ್ಸೆಯ ಮೂಲ ತತ್ವವಾಗಿದೆ ಎಂದರು.

ಸಾತ್ವಿಕ ಆಹಾರ, ತರಕಾರಿಯನ್ನು ನಿಯಮಿತವಾಗಿ ಸೇವಿಸುವ ಮೂಲಕ ಹಾಗೂ ವಾಯುವಿಹಾರ, ಲಘು ವ್ಯಾಯಾಮ, ಲಘು ಸಂಗೀತ ಆಲಿಕೆ, ಯೋಗ, ಧ್ಯಾನಗಳಿಂದ ಆರೋಗ್ಯದಲ್ಲಿ ಗುಣಾತ್ಮಕ ಬದಲಾವಣೆ ತಂದುಕೊಳ್ಳಲು ಸಾಧ್ಯ ಈ ನಿಟ್ಟಿನಲ್ಲಿ ಪ್ರಕೃತಿ ಚಿಕಿತ್ಸೆ ಪರಿಣಾಮಕಾರಿ ಫಲಿತಾಂಶ ನೀಡಬಲ್ಲದು ಎಂದು ವಿಶ್ಲೇಷಿಸಿದರಲ್ಲದೆ ಉಜಿರೆಯ ಎಸ್‌ಡಿಎಂ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಕಾಲೇಜಿನ ಪ್ರಾಚಾರ್ಯ ಡಾ.ಪ್ರಶಾಂತ ಶೆಟ್ಟಿ ಹಾಗೂ ಡಾ.ಶಿವಪ್ರಸಾದ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ರಾಜ್ಯದ ಎಲ್ಲ ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಈ ರೀತಿಯ ಶಿಬಿರಗಳನ್ನು ನ. 18 ರವರೆಗೆ ಕೈಗೊಂಡಿದ್ದು ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆಯಬೇಕೆಂದು ಮನವಿ ಮಾಡಿಕೊಂಡರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ, ಆಧುನಿಕ ಇಂದಿನ ದಿನಮಾನಗಳಲ್ಲಿ ನಾವಿಂದು ಅವಸರ, ಧಾವಂತ ಜೀವನ ನಡೆಸುವಂತಾಗಿದೆ. ದುಡಿಮೆ, ಹಣ ಗಳಿಕೆಯ ಬೆನ್ನು ಹತ್ತಿ ಆರೋಗ್ಯದೆಡೆಗೆ ಗಮನ ಇಲ್ಲದಂತಾಗಿದೆ. ಕಾಯಕ ಎಷ್ಟು ಅವಶ್ಯವೂ ಈ ಕಾಯ-ಶರೀರದ ಆರೋಗ್ಯವನ್ನು ಕಾಯ್ದುಕೊಳ್ಳುವದೂ ಅಷ್ಟೇ ಮುಖ್ಯವಾಗಿದೆ ಎಂದರು.

ನಮ್ಮ ಪೂರ್ವಜರು ಚೆನ್ನಾಗಿ ಊಟ ಮಾಡಿ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಪ್ರಕೃತಿಯಲ್ಲಿ ಸಹಜವಾಗಿ ಲಭ್ಯವಾಗುವ ಸಂಪನ್ಮೂಲಗಳನ್ನೇ ಚಿಕಿತ್ಸೆಯ ಔಷಧಿಯನ್ನಾಗಿ ಮಾಡಿಕೊಂಡಿದ್ದರು. ಸೌಲಭ್ಯಗಳು ಹೆಚ್ಚಾದಂತೆ ಮನುಷ್ಯನಲ್ಲಿ ಆಲಸ್ಯತನ ಹೆಚ್ಚುತ್ತಿದೆ ನಾವಿಂದು ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳದಿದ್ದಲ್ಲಿ ಬರಲಿರುವ ದಿನಮಾನಗಳಲ್ಲಿ ಇನ್ನಷ್ಟು ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾದೀತು ಆದ್ದರಿಂದ ಇಂದೇ ನಾವು ಎಚ್ಚೆತ್ತುಕೊಳ್ಳಬೇಕಿದೆ ಎಂದರು.

ವೇದಿಕೆಯ ಮೇಲೆ ಡಾ.ಬಸವರಾಜ ಹಂಡಿ, ಡಾ.ಶೋಭೀತಾ ತಂತ್ರಿ, ನಗರಸಭೆಯ ಮಾಜಿ ಸದಸ್ಯ ಸಿ.ಕೆ.ಮಾಳಶೆಟ್ಟಿ ಉಪಸ್ಥಿತರಿದ್ದರು. ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಕಾರ್ಯದರ್ಶಿ ವ್ಹಿ.ಕೆ.ಗುಳಗೌಡ್ರ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಹಿರಿಯರಾದ ಎಸ್.ಎಸ್.ಪಾಟೀಲ, ಎಂ.ಬಿ.ಚನ್ನಪ್ಪಗೌಡ್ರ, ಕೆ.ಐ.ಕುರಗೋಡ, ವೀರಣ್ಣ ಕೊಟಗಿ, ಎಂ.ಕೆ.ತುಪ್ಪದ, ವ್ಹಿ.ಆರ್.ಗೊಬ್ಬರಗುಂಪಿ, ಬಿ.ಎಚ್.ಗರಡಿಮನಿ, ಎಂ.ಎನ್.ಕಾಮನಹಳ್ಳಿ, ಐ.ಬಿ.ಮೈದರಗಿ, ರೇಣುಕಾ ಕರೇಗೌಡರ, ಪ್ರಜ್ವಲ ಹಿರೇಮಠ, ಕೀರ್ತಿ ಕೆ.ಎ, ಕಾವ್ಯಾ ಪೂಜಾರ ಸೇರಿದಂತೆ ಸುಮಾರು 50ಕ್ಕೂ ಹೆಚ್ಚು ಜನರು

## ಮಂಜು ಶಾಲೆಯಲ್ಲಿ ಮಕ್ಕಳ ದಿನಾಚರಣೆ



❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಗದಗ, ಜಿಲ್ಲಾ ನ್ಯಾಯವಾದಿಗಳ ಸಂಘ, ಗದಗ, ಮಂಜು ಶಿಕ್ಷಣ ಸಂಸ್ಥೆ, ಬೆಟಗೇರಿ-ಗದಗ ಸಂಯುಕ್ತಾಶ್ರಯದಲ್ಲಿ ಮಂಜು ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶುಕ್ರವಾರ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ. ಸಿ.ಎಸ್.ಶಿವನಗೌಡ್ರ ಉದ್ಘಾಟಿಸಿ ಮಾತನಾಡಿ ಇಂದಿನ ಮಕ್ಕಳೇ ದೇಶದ ಭವಿಷ್ಯವಾಗಿದ್ದು ವಿದ್ಯಾರ್ಥಿಗಳೆಲ್ಲಾ ಚೆನ್ನಾಗಿ ಅಭ್ಯಾಸ ಮಾಡಿ, ದೇಶದ ಒಳ್ಳೆಯ ನಾಗರಿಕರಾಗಿ ಬೆಳೆಯಬೇಕು. ಸರ್ಕಾರ ಉಚಿತವಾಗಿ ಶಿಕ್ಷಣ ಸೇರಿದಂತೆ ಹಲವು ಸೌಲಭ್ಯ ನೀಡುತ್ತಿದ್ದು, ಇದರ ಪ್ರಯೋಜನ ಪಡೆದು ಸಾಧನೆಯ ಹಾದಿಯಲ್ಲಿ ನಡೆಯಬೇಕು ಎಂದು ಕರೆ ನೀಡಿದರು.

ಮಂಜು ಶಿಕ್ಷಣ ಸಂಸ್ಥೆಯ ಅಧ್ಯಕ್ಷತೆ ವಹಿಸಿದ ಶಂಕರಸಿಂಗ್ ಎಸ್ ರಜಪೂತ, ಅತಿಥಿಗಳಾಗಿ ಸಹಾಯಕ ಕಾನೂನು ನೆರವು ಅಭಿರಕ್ಷಕರಾದ ಗುರುರಾಜ ಗೌರಿ, ಶ್ರೀಮತಿ ಸುವರ್ಣಾ ಅಕ್ಕಿ, ಪ್ಯಾನಲ್ ವಕೀಲರು, ಗದಗ, ವಿರೇಂದ್ರಸಿಂಗ್ ರಜಪೂತ, ವಿನಾಯಕಸಿಂಗ್ ರಜಪೂತ ಸೇರಿದಂತೆ ಎಲ್ಲಾ ಸಿಬ್ಬಂದಿ ಹಾಗೂ ಮಂಜು ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳು ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ವಿಶೇಷ ಕಮ್ಮಟ

❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಕರ್ನಾಟಕ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ ಬೆಂಗಳೂರು ಇವರ ಸಹಯೋಗದಲ್ಲಿ ಅ.ವಿ.ವಿ.ಪ್ರ.ಸಮಿತಿಯ ಶ್ರೀ ಅನ್ನದಾನೇಶ್ವರ ಕಲಾ, ವಿಜ್ಞಾನ, ವಾಣಿಜ್ಯ, ಬಿಸಿಎ ಹಾಗೂ ಸ್ನಾತಕೋತ್ತರ ಕೇಂದ್ರ, ನರೇಗಲ್ ಗದಗ ಜಿಲ್ಲೆ ಐ.ಕ್ಯು.ಎ.ಸಿ. ಹಾಗೂ ಕನ್ನಡ ವಿಭಾಗದ ವತಿಯಿಂದ " ಆಧುನಿಕ ಕರ್ನಾಟಕ ನಿರ್ಮಾಣ: ಗದಗ ಜಿಲ್ಲೆಯ ಕೊಡುಗೆ " ಒಂದು ದಿನದ ರಾಜ್ಯ ಮಟ್ಟದ ವಿಶೇಷ ಕಮ್ಮಟವನ್ನು ನರೇಗಲ್ಲದ ಮಹಾವಿದ್ಯಾಲಯದ ಸಭಾಭವನದಲ್ಲಿ ನವೆಂಬರ್ 21 ರಂದು ಬೆಳಿಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

### ಗುಡ್ಡಾಪೂರ ದಾನಮ್ಮತಾಯಿಯ ತೊಟ್ಟಿಲೋತ್ಸವ-ನಾಮಕರಣ

# ಮಕ್ಕಳಿಗೆ ಒಳ್ಳೆ ಸಂಸ್ಕಾರ, ಸಂಸ್ಕೃತಿ ನೀಡಿ : ವೀರೇಶ್ವರ ಶಾಸ್ತ್ರೀ



❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಮಕ್ಕಳಿಗೆ ಒಳ್ಳೆ ಸಂಸ್ಕಾರ, ಸಂಸ್ಕೃತಿ ನೀಡುವ ಮೂಲಕ ಅವರಿಗೆ ಉತ್ತಮ ಶಿಕ್ಷಣ ನೀಡಿ ಧರ್ಮ ಮಾರ್ಗದಲ್ಲಿ ಮುನ್ನಡೆಸಲು ಪಾಲಕ ಪೋಷಕರು ಮುಂದಾಗಬೇಕೆಂದು ನಂದಿಕೇಶ್ವರದ ವೀರೇಶ್ವರ ಶಾಸ್ತ್ರೀಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಗದುಗಿನ ಬಸವೇಶ್ವರ ನಗರದ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ವೀರಭದ್ರ ದೇವಸ್ಥಾನ ಟ್ರಸ್ಟ ಕಮಿಟಿ, ಶ್ರೀ ಶಂಕರಲಿಂಗ ದೇವಸ್ಥಾನ ಟ್ರಸ್ಟ ಕಮಿಟಿ ಹಾಗೂ ದಾನೇಶ್ವರಿ ಮಹಿಳಾ ಮಂಡಳ ಎರ್ಪಡಿಸಿರುವ ಶ್ರೀ ಶರಣೆ ದಾನಮ್ಮದೇವಿಯ 19ನೇ ವರ್ಷದ ಪುರಾಣ ಪ್ರವಚನ ಮಾಲಿಕೆಯಲ್ಲಿ ಶರಣೆ ದಾನಮ್ಮತಾಯಿ ತೊಟ್ಟಿಲು ಮತ್ತು ನಾಮಕರಣ ಸಮಾರಂಭ ನೆರವೇರಿಸಿ ಮಾತನಾಡಿದರು.

ಮಕ್ಕಳಿಗೆ ಬಾಲ್ಯದಲ್ಲಿಯೇ ಉತ್ತಮ ಹವ್ಯಾಸಗಳನ್ನು ರೂಢೀಸಬೇಕು. ಟಿ.ವ್ಹಿ, ಮೊಬೈಲ್ ಹುಚ್ಚು ತಪ್ಪಿಸಿ ಓದಿನ ಕಡೆ ಗಮನ ಹರಿಸುವಂತೆ ಮಾಡಬೇಕು. ಒಳ್ಳೆ ಶಿಕ್ಷಣದಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಶೋಭಾ ಗುಗ್ಗರಿ ವಹಿಸಿದ್ದರು. ಅತಿಥಿಗಳಾಗಿ ವಿಜಯಲಕ್ಷ್ಮೀ ಕಾತರಕಿ, ದೀಪಾ ಬೇವಿನಮರದ, ಸುಧಾ ಕೆರೂರ, ವಿಜಯಲಕ್ಷ್ಮೀ ಕುಬಸದ, ನಾಗರತ್ನ ಬಡಿಗಣ್ಣವರ ಆಗಮಿಸಿದ್ದರು.

ಪುರಾಣ ಪ್ರವಚನಕಾರರಾದ ವೀರೇಶ್ವರ ಶಾಸ್ತ್ರೀಗಳು ಅವರು ಪುರಾಣದಲ್ಲಿ ದಾನಮ್ಮತಾಯಿ ಜನನ, ತೊಟ್ಟಿಲೋತ್ಸವ, ನಾಮಕರಣವನ್ನು ವಿಶ್ಲೇಷಿಸಿದರು. ಸಭಾಂಗಣದಲ್ಲಿ ಅಲಂಕೃತಗೊಳಿಸಿದ್ದ ತೊಟ್ಟಿಲಲ್ಲಿ ದಾನಮ್ಮಳ ಭಾವಚಿತ್ರವಿಟ್ಟು ತೊಟ್ಟಿಲೋತ್ಸವವನ್ನು ಭಕ್ತ ಮಹಿಳೆಯರು ಲಾಲಿ ಜೋಗುಳ ಹಾಡುವ ಮೂಲಕ ತಮ್ಮ ಪ್ರೀತಿ, ಭಕ್ತಿಭಾವವನ್ನು ಮೆರೆದರು.

ಪುರಾಣ ಸಮಿತಿಯ ಅಧ್ಯಕ್ಷೆ ಶಾರದಾ ಹಚಡದ, ಗೌರವಾಧ್ಯಕ್ಷೆ ಶೈಲಜಾ ಕೊಡೇಕಲ್, ಕಾರ್ಯದರ್ಶಿ ಸುರೇಖಾ ಪಿಳ್ಳಿ, ಮುಂತಾದವರು ಈ ಕಾರ್ಯಕ್ರಮವನ್ನು ಮುಂದಾಳತ್ವ ವಹಿಸಿದ್ದರು.

ಭಕ್ತಿ ಸೇವೆಯನ್ನು ಶ್ರೀಶೈಲ ಯಂಡಿಗೇರಿ, ಶಂಕರ ಕಾಡಪ್ಪನವರ, ನಾಗರತ್ನ ಬಡಿಗಣ್ಣವರ, ಲಲಿತಾ ಪಿಳ್ಳಿ, ರತ್ನಕ್ಕ ಚನ್ನಳ್ಳಿಮಠ, ಸಂಜನಾ ಪಿಳ್ಳಿ, ಪುಷ್ಪಾವತಿ ಬಳ್ಳಾರಿ, ಸುಮಂಗಲಾ ಯಚ್ಚಲಗಾರ, ಅಗಸ್ತ್ಯ ಭೂಮಾ, ಅನ್ನಪೂರ್ಣ ಸವದತ್ತಿ, ಗುರುಬಸವಲಿಂಗಪ್ಪ ತಡಸದ, ಜಯಶ್ರೀ ವೇಲೂರ, ಪ್ರಮೀಳಾ ನಾರಾಯಣಪೂರ, ದಾನೇಶ ತಡಸದ ವಹಿಸಿದ್ದರು.ಸ

### ದಾನಮ್ಮ-ಸೋಮಲಿಂಗ ವಿವಾಹ ಸಮಾರಂಭ

ನ. 18 ರಂದು ಮಂಗಳವಾರ ಸಂಜೆ 6 ಗಂಟೆಗೆ ಶರಣೆ ದಾನಮ್ಮ ತಾಯಿ ಹಾಗೂ ಸೋಮಲಿಂಗ ವಿವಾಹ ಸಮಾರಂಭವನ್ನು ಗಂಗಾಧರ ಹಿರೇಮಠ ನಡೆಸಿಕೊಡುವರು.

ಅಧ್ಯಕ್ಷತೆಯನ್ನು ಶ್ರೀಮತಿ ಮಹಾನಂದಾ ಕಾತರಕಿ ವಹಿಸುವರು. ಅತಿಥಿಗಳಾಗಿ ಸುಧಾ ಚಳ್ಳಮರದ, ಶಾಂತಕ್ಕ ತಡಸದ, ಶ್ರೀದೇವಿ ಮೂರಶಿಳ್ಳಿನ, ಪ್ರಮೀಳಾ ನಾರಾಯಣಪೂರ, ರತ್ನಕ್ಕ ಕಲ್ಲೂರ, ಮಹಾನಂದ ಯಂಡಿಗೇರಿ, ಸುಜಾತಾ ಕಾಡಪ್ಪನವರ ಆಗಮಿಸುವರು.

## ಯುವ ಮತ್ತು ಮಹಿಳಾ ಮತದಾರರು ಎನ್.ಡಿ.ಎ ಮೈತ್ರಿಗೆ ಜೈ ಅಂದಿದ್ದಾರೆ

❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : 2025ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ನಿರೀಕ್ಷೆಗೂ ಮೀರಿ ಭರ್ಜರಿ ಗೆಲುವು ದಾಖಲಿಸಿದೆ. ಬಿಜೆಪಿ ಮತ್ತು ಜೆಡಿಯು ಮೈತ್ರಿ 202 ಸ್ಥಾನಗಳನ್ನು ಪಡೆದು ಅಭೂತಪೂರ್ವ ಸಾಧನೆ ಮಾಡಿದೆ. ಮಹಾಘಟಬಂಧನ ಕೇವಲ 35 ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಕಾಂಗ್ರೆಸ್ ಪಕ್ಷದ ಸಾಧನೆ ತೀರಾ ಕಳಪೆಯಾಗಿದೆ. ಎನ್‌ಡಿಎ ಗೆಲುವಿಗೆ ಸೀಟ್ ಹಂಚಿಕೆ, ಅಭಿವೃದ್ಧಿ, ಜಾತಿ ಸಮೀಕರಣ, ಮಹಿಳಾ ಮತ್ತು ಯುವ ಮತದಾರರ ಬೆಂಬಲ, ಹಾಗೂ ಡಬಲ್ ಇಂಜಿನ್ ಸರ್ಕಾರದ ಭರವಸೆಗಳು ಕಾರಣವಾಗಿವೆ ಅಂತ ಬಿಜೆಪಿ ಮಹಿಳಾ ಶಹರ ಘಟಕದ ಪ್ರಧಾನ ಕಾರ್ಯದರ್ಶಿ ಸ್ವಾತಿ ಅಕ್ಕಿ ಹೇಳಿದರು.

ನಗರದಲ್ಲಿ ಪ್ರಕಟಣೆ ಮೂಲಕ ಸಂತಸ ಹಂಚಿಕೊಂಡು ಮಾತನಾಡಿದ ಅವರು, ಕಾಂಗ್ರೆಸ್ ನೇತೃತ್ವದ ಮಹಾಘಟಬಂಧನ್ ಮೈತ್ರಿಕೂಟವು ತೀರಾ ಕಳಪೆ ಸಾಧನೆ ಮಾಡಿದೆ. ಕಳೆದ ಬಾರಿ 50 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 27ರಲ್ಲಿ ಜಯಗಳಿಸಿತ್ತು. ಈ ಬಾರಿಯೂ 50 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಆ ಪಕ್ಷ ಕೇವಲ 6ರಲ್ಲಿ ಜಯ ಸಾಧಿಸಿದೆ. ಇದು ಬಿಹಾರದಲ್ಲಿ ಕಾಂಗ್ರೆಸ್ಸಿನ 2ನೇ ಅತ್ಯಂತ ಕಳಪೆ ಸಾಧನೆಯಾಗಿದೆ ಅಂತ ಸ್ವಾತಿ ಅಕ್ಕಿ ವ್ಯಂಗ್ಯವಾಡಿದರು.

ಬಿಹಾರ ವಿಧಾನಸಭಾ ಚುನಾವಣೆಯ ಪಲಿತಾಂಶದಿಂದ ಕರ್ನಾಟಕದಲ್ಲಿರುವ ಕಾಂಗ್ರೆಸ್‌ಗೆ ದೊಡ್ಡ ಶಾಕ್ ನೀಡಿದಂತಾಗಿದೆ. ಪ್ರಧಾನಿ ಮೋದಿ ವರ್ಚಸ್ ಕಡಿಮೆ ಆಗಿದೆ ಅಂತ ಬೊಬ್ಬೆ ಹೊಡೆಯುತ್ತಿದ್ದ ಲೋಕಲ್ ನಾಯಕರಿಗೆ ಬಿಹಾರಿಗಳು ಮತದಾನದ ಮೂಲಕ ತಕ್ಕ ಉತ್ತರ ನೀಡಿದ್ದಾರೆ. ನಿಮ್ಮ ವೋಟ್ ಚೋರಿ ಅಭಿಯಾನವನ್ನು ಈಗಲಾದರೂ ಕೈಬಿಟ್ಟು ಅಭಿವೃದ್ಧಿ ಕೆಲಸ ಮಾಡುವ ಮೂಲಕ ಮತದಾರರ ಮನಗೆಲ್ಲಲು ಪ್ರಯತ್ನಿಸಿ ಅಂತ ಸ್ವಾತಿ ಅಕ್ಕಿ ಹೇಳಿದರು.

ಬಿಹಾರದ 243 ವಿಧಾನಸಭಾ ಕ್ಷೇತ್ರಗಳ ಭವಿಷ್ಯವನ್ನು ಮತದಾರ ಪ್ರಭುಗಳು ಬರೆದಿದ್ದಾರೆ. ಹಾಲಿ ಮುಖ್ಯಮಂತ್ರಿ ನಿತೀಶ್‌ಕುಮಾರ್ ನೇತೃತ್ವದ ಎನ್.ಡಿ.ಎ ಮೈತ್ರಿಕೂಟವು ಭರ್ಜರಿ ದ್ವಿಶತಕ ಭಾರಿಸಿದೆ. ತೇಜಸ್ವಿ ಯಾದವ್ ನೇತೃತ್ವದ ಮಹಾಘಟಬಂಧನ್ ತನ್ನ ಅಸ್ಥಿತ್ವವನ್ನೇ ಕಳೆದುಕೊಳ್ಳುವಂತಾಯಿತು. ಇನ್ನೂ ರಾಜಕೀಯ ತಂತ್ರಗಾರ ಪ್ರಶಾಂತ್ ಕಿಶೋರ್ ಅವರ 'ಜನ್ ಸುರಾಜ್' ಪಕ್ಷ ಹೇಳಲು ಹೆಸರಿಲ್ಲದಂತೆ ಆಯಿತು ಅಂತ ಹೇಳಿದರು.

ನೀರು ಅತ್ಯಮೂಲ್ಯ
ಮಿತವಾಗಿ ಬಳಸಿ

# ಗದಗ ವಿಠ್ಠಲ ಮಂದಿರದಲ್ಲಿ ಇಂದು-ನಾಳೆ ಜ್ಞಾನೇಶ್ವರ ಮಹಾರಾಜರ ದಿಂಡಿ: ಉತ್ಸವ

❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಗದಗ ಭಾವಸಾರ ಕ್ಷತ್ರೀಯ ಸಮಾಜವು ಗದಗ ಜವಳಿ ಬಜಾರದ ವಿಠ್ಠಲ ಮಂದಿರದಲ್ಲಿ ಸಂತ ಶ್ರೀ ಜ್ಞಾನೇಶ್ವರ ಮಹಾರಾಜರ 729ನೇ ಸಂಜೀವಿನಿ ಸಮಾಧಿ ನಿಮಿತ್ಯ ದಿಂಡಿ ಸೋಹಳಾ ಉತ್ಸವದ ಅಂಗವಾಗಿ ನ.17 ರಂದು ಸೋಮವಾರ ಹಾಗೂ ನ. 18 ರಂದು ಮಂಗಳವಾರ ವಿವಿದ ಕಾರ್ಯಕ್ರಮಗಳು ಜರುಗಲಿವೆ.

ನ.17 ರಂದು ಸೋಮವಾರ ಬೆಳಿಗ್ಗೆ 4 ರಿಂದ 6 ಗಂಟೆಯವರೆಗೆ ಕಾಕಡಾರತಿ ಮಂಜಾನೆ 8 ರಿಂದ 9 ಗಂಟೆಯವರೆಗೆ ಗ್ರಂಥರಾಜ ಶ್ರೀ ಜ್ಞಾನೇಶ್ವರ ಮಹಾರಾಜರ ಸಾಮೂಹಿಕ ಪಾರಾಯಣ, ಮುಂಜಾನೆ 11 ರಿಂದ 1 ಗಂಟೆಯವರೆಗೆ ಶ್ರೀ ಸಂತ ಜ್ಞಾನೇಶ್ವರ ಮಹಾರಾಜರ ಸಂಜೀವಿನಿ ಸಮಾಧಿ ಸೋಹಳಾ, ಗುಲಾಲ, ಕೀರ್ತನೆಯು ಶ್ರೀಕ್ಷೇತ್ರ ಪಂಢರಪೂರದ ಪೂಜ್ಯ ಗುರುವರ್ಯ ಯಶವಂತ ಪ್ರಭಾಕರ ದಾದಾ ಬೋಧಲೆ




ಮಹಾರಾಜರಿಂದ ಜರುಗಲಿದೆ.

ಸಂಜೆ 4 ರಿಂದ 5 ಗಂಟೆಯವರೆಗೆ ಸಾಮೂಹಿಕ ನಾಮ ಜಪ, ಸಂಜೆ 5 ರಿಂದ 6 ಗಂಟೆಯವರೆಗೆ ಶ್ರೀಕ್ಷೇತ್ರ ಪಂಢರಪೂರದ ಪೂಜ್ಯ ಪ್ರಭಾಕರ (ದಾದಾ) ಬೋಧಲೆ ಮಹಾರಾಜರಿಂದ ಪ್ರವಚನ, ಸಂಜೆ 7 ರಿಂದ 9 ಗಂಟೆಯವರೆಗೆ ಕೀರ್ತನೆ ನಂತರ ಜಾಗರಣೆ ಭಜನೆ ಜರುಗುವದು.

ನ. 18 ರಂದು ಮಂಗಳವಾರ ಬೆಳಿಗ್ಗೆ 4 ರಿಂದ 6 ಗಂಟೆಯವರೆಗೆ ಕಾಕಡಾರತಿ, ಮಧ್ಯಾನ್ಹ 12 ರಿಂದ 1 ಗಂಟೆಯವರೆಗೆ ಪೂಜ್ಯ ಪ್ರಭಾಕರ (ದಾದಾ) ಬೋಧಲೆ ಮಹಾರಾಜರಿಂದ ಕಾಲಾಕೀರ್ತನೆ ಜರುಗುವದು, ನಂತರ ಆರತಿ ಮಹಾಪ್ರಸಾದ ಜರುಗುವದು. ಸಂಜೆ 7 ರಿಂದ 9 ಗಂಟೆಯವರೆಗೆ ದಿಂಡಿಯು ನಗರ ಪ್ರದಕ್ಷಿಣೆ ಸಂಚರಿಸಿ ದೇವಸ್ಥಾನಕ್ಕೆ ಮರಳಿದ ನಂತರ ಆರತಿ ಮಹಾಪ್ರಸಾರ ಜರುಗುವದು. ಸಮಾಜಬಾಂಧವರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಸಕಾಲದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಲು ಗದಗ ಭಾವಸಾರ ಕ್ಷತ್ರೀಯ ಸಮಾಜ, ಉತ್ಸವ ಸಮಿತಿಯ ಪದಾಧಿಕಾರಿಗಳು ವಿನಂತಿಸಿದ್ದಾರೆ.

# ಪತ್ರಕರ್ತರ ಸಂಘದ ಗದಗ ಜಿಲ್ಲಾ ಘಟಕ ನೂತನ ಪದಾಧಿಕಾರಿಗಳ ಪದಗ್ರಹಣ ಇಂದು

ಗದಗ, ನ. 16 : ನಗರದ ಮುಳಗುಂದ ರಸ್ತೆಯಲ್ಲಿರುವ ಪತ್ರಿಕಾ ಭವನದಲ್ಲಿ ನ.17 ರಂದು ಬೆಳಗ್ಗೆ 11ಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾ ಘಟಕದ 2025-28ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಪ್ರಮಾಣ ಪತ್ರ ವಿತರಣೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟನೆ ಹಾಗೂ ಪ್ರತಿಜ್ಞಾವಿಧಿ ಬೋಧನೆ ಮಾಡುವರು. ಶಾಸಕ ಸಿ.ಸಿ.ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜೂ ಹೆಬ್ಬಳ್ಳಿ ವಹಿಸುವರು. ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಹಿರೇಮಠ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚವಡಿ ಅವರಿಗೆ ವಿಶೇಷ ಸನ್ಮಾನ ಮಾಡಲಾಗುತ್ತಿದೆ.

ಹಿರಿಯ ಪತ್ರಕರ್ತರಾದ ಡಾ.ಅನಂತ ಕಾರ್ಕಳ, ಬಸವರಾಜ ದಂಡಿನ, ಸೂರ್ಯನಾರಾಯಣ ನರಗುಂದಕರ, ಹನಮಾನಸಿಂಗ್ ಜಮಾದಾರ, ಎಸ್.ವಿ. ಶಿವಪ್ಪಯ್ಯನಮಠ, ಆನಂದ ಸಾಲಿಗ್ರಾಮ ಅವರನ್ನು ಸನ್ಮಾನಿಸಲಾಗುತ್ತಿದೆ.

### ಪದಾಧಿಕಾರಿಗಳಿಗೆ ಪದಗ್ರಹಣ:

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಅರುಣಕುಮಾರ ಹಿರೇಮಠ, ಪ್ರಧಾನ ಕಾರ್ಯದರ್ಶಿ ಶರಣು ದೊಡ್ಡೂರ, ಉಪಾಧ್ಯಕ್ಷ ಅನೀಲ ತೆಂಬದಮನಿ, ಉಪಾಧ್ಯಕ್ಷ ಪ್ರಭುಸ್ವಾಮಿ ಅರವಟಗಿಮಠ, ಉಪಾಧ್ಯಕ್ಷ ವಿ.ಡಿ. ಕಣವಿ, ಕಾರ್ಯದರ್ಶಿ ಸಂಗಪ್ಪ ವ್ಯಾಪಾರಿ, ಕಾರ್ಯದರ್ಶಿ ಬನೇಶ ಕುಲಕರ್ಣಿ, ಕಾರ್ಯದರ್ಶಿ ಚಂದ್ರಶೇಖರ ಕುಸ್ಲಾಪೂರ, ಖಜಾಂಚಿ ರಾಮಣ್ಣ ವಗ್ಗಿ, ಜಿಲ್ಲಾ ಕಾರ್ಯಾಕಾರಿಣಿ ಸದಸ್ಯರಾದ ವೆಂಕಟೇಶ ಇಮರಾಪೂರ, ರುದ್ರಗೌಡ ಪಾಟೀಲ, ಸಂತೋಷ ಮುರಡಿ, ಆದರ್ಶ ಕುಲಕರ್ಣಿ, ಮಲ್ಲು ಕಳಸಾಪೂರ, ಶಿವಕುಮಾರ ಶಶಿಮಠ, ಮಹಾಲಿಂಗಯ್ಯ ಹಿರೇಮಠ, ಮಂಜುನಾಥ ಪತ್ತಾರ, ಗಿರೀಶ ಕಮ್ಮಾರ, ಮೌನೇಶ ಬಡಿಗೇರ, ಅಜಿತಕುಮಾರ ಹೊಂಬಾಳಿ, ಸಂತೋಷ ಕೊಣ್ಣೂರ, ಆನಂದಯ್ಯ ವಿರಕ್ತಮಠ, ಯಲ್ಲಪ್ಪ ತಳವಾರ ಪದಗ್ರಹಣ ಮಾಡುವವರು ಎಂದು ಜಿಲ್ಲಾ ಘಟಕದ ಪದಾಧಿಕಾರಿಗಳು ತಿಳಿಸಿದ್ದಾರೆ.

## ಗದಗ ಜಿಲ್ಲಾ ಮಾಜಿ ಸೈನಿಕರ ಸಂಘ (ರಿ) ನಿರ್ಮಿಸಿದ

# ಸೈನಿಕ ಸಮುದಾಯ ಭವನ, ತರಬೇತಿ ಕೇಂದ್ರ ರಾಜ್ಯಕ್ಕೆ ಮಾದರಿ





❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಗದಗ ಜಿಲ್ಲಾ ಮಾಜಿ ಸೈನಿಕರ ಸಂಘವು ಗದುಗಿನಲ್ಲಿ ನಿರ್ಮಿಸಿರುವ ಸೈನಿಕ ಸಮುದಾಯ ಭವನ ಹಾಗೂ ತರಬೇತಿ ಕೇಂದ್ರವು ರಾಜ್ಯದಲ್ಲಿಯೇ ಮಾದರಿಯಾಗಿದೆ ಎಂದು ಮಲ್ಲಸಮುದ್ರದ ಓಂಕಾರೇಶ್ವರ ಹಿರೇಮಠದ ಪೂಜ್ಯ ಫಕ್ಕೀರೇಶ್ವರ ಪಟ್ಟಾಧ್ಯಕ್ಷರು ಹೇಳಿದರು.

ಅವರು ಶನಿವಾರ ಸೈನಿಕ ಸಮುದಾಯ ಭವನ ಹಾಗೂ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿದ್ದ ದಾನಿಗಳಿಗೆ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ದೇಶದ ರಕ್ಷಣೆ ಮತ್ತು ಹಿತವನ್ನು ಕಾಪಾಡುವಲ್ಲಿ ಸೈನಿಕರು ಹಗಲಿರುವ ತಮ್ಮ ಜೀವದ ಹಂಗು ತೊರೆದು ದಕ್ಷತೆಯಿಂದ ಕಾರ್ಯ ಮಾಡುತ್ತಿದ್ದಾರೆ ಅವರಿಗೆ ನೈತಿಕ ಬಲ ಆತ್ಮಸ್ಥೈರ್ಯವನ್ನು ತುಂಬುವ ಮೂಲಕ ನಾವು ಸದಾವಕಾಲ ಸೈನಿಕರ ಶ್ರೇಯೋಭಿವೃದ್ಧಿಯನ್ನು ಬಯಸಬೇಕು ಎಂದರು.

ಕಟ್ಟಡವು ಸರ್ವಾಂಗ ಸುಂದರವಾಗಿ ನಿರ್ಮಾಣಗೊಂಡಿದ್ದು ಇದಕ್ಕೆಲ್ಲ ದೇಣಿಗೆ ನೀಡಿದ ಸಮಸ್ತ ದಾನಿಗಳು ಅಭಿನಂದನಾರ್ಹರು ಬರಲಿರುವ ದಿನಗಳಲ್ಲಿ ಮೇಲಿನ ಮೊದಲ ಅಂತಸ್ತು ಕಟ್ಟಡವು ಸಹ ದಾನಿಗಳ ಸಹಕಾರದೊಂದಿಗೆ ಶೀಘ್ರದಲ್ಲಿ ನಿರ್ಮಾಣಗೊಳ್ಳಲಿ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗದಗ ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಜಿ.ಬಿ.ಮಾಲಗಿತ್ತಿಮಠ ಅವರು ಮಾತನಾಡಿ ಈ ಕಟ್ಟಡ ಸುಂದರವಾಗಿ ರೂಪುಗೊಳ್ಳುವಲ್ಲಿ ಸಂಘದ ಸರ್ವ ಸದಸ್ಯರ ದೇಣಿಗೆ, ಸಹಾಯ ಸಹಕಾರ ತುಂಬಾ ದೊಡ್ಡದು ಇದೆಲ್ಲವೂ ಒಗ್ಗಟ್ಟಿನ ಪ್ರತಿಫಲ ಇದಕ್ಕೆ ಸರ್ಕಾರ ಮತ್ತು ಜನಪ್ರತಿನಿಧಿಗಳ ಸಹಕಾರವನ್ನು ಮರೆಯುವಂತಿಲ್ಲ ಎಂದರು.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ 40 ಲಕ್ಷ ರೂ, ಸಂಸದ ಬಸವರಾಜ ಬೊಮ್ಮಾಯಿ 5 ಲಕ್ಷ ರೂ, ವಿಧಾನ ಪರಿಷತ್ ಸದಸ್ಯ 4 ಲಕ್ಷ ರೂ, ವಿಧಾನ ಪರಿಷತ್ ಸದಸ್ಯರೂ ಹಾಗೂ ಸರ್ಕಾರದ ಮುಖ್ಯ ಸಚೇತಕರೂ ಆದ ಸಲೀಂ ಅಹ್ಮದ್ ಅವರು 2 ಲಕ್ಷ ಹೀಗೆ ಒಟ್ಟು 51 ಲಕ್ಷ ರೂ.ಗಳಷ್ಟು ಹಣ ಜನಪ್ರತಿನಿಧಿಗಳು ಸರ್ಕಾರ ಅನುದಾನದಿಂದ ಬಿಡುಗಡೆಗೊಳಿಸಿ ಮಾರ್ಗದರ್ಶನ ನೀಡಿದ್ದರ ಪರಿಣಾಮವಾಗಿ ಈ ಕಾರ್ಯ ಸಾಕಾರಗೊಳ್ಳಲು ಕಾರಣವಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮದರ್ಶಿ ಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರೂ ಸಹ 1 ಲಕ್ಷ 50 ಸಾವಿರ ರೂ.ಗಳನ್ನು ಪ್ರಸಾದವಾಗಿ ನೀಡಿದ್ದು ಇವರೆಲ್ಲರನ್ನು ಸಂಘವು ಸದಾವಕಾಲ ಸ್ಮರಿಸುವದು ಎಂದರು.

ಈ ಕಟ್ಟಡದಲ್ಲಿ ಸೈನ್ಯಕ್ಕೆ ಸೇರಲಿಚ್ಛಿಸುವ ಯುವ ಜನಾಂಗಕ್ಕೆ ನಿವೃತ್ತ ಸೈನ್ಯಾಧಿಕಾರಿಗಳಿಂದ, ಹಿರಿಯ ಮಾಜಿ ಸೈನಿಕರಿಂದ ಮತ್ತು ವಿಷಯ ತಜ್ಞರಿಂದ ತರಬೇತಿ ನೀಡುವ ಸದುದ್ದೇಶವನ್ನು ಹೊಂದಲಾಗಿದೆ. 2026-27ನೇ ಸಾಲಿನಲ್ಲಿ ಮೇಲಿನ ಕಟ್ಟಡವನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಮಾಲಗಿತ್ತಿಮಠ ವಿವರಿಸಿದರು.

ಸಮಾರಂಭದಲ್ಲಿ ದಾನಿಗಳನ್ನು ಹಾಗೂ ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದ ಸಮಸ್ತರನ್ನು ಮತ್ತು ಶ್ರಮಿಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಕಾರ್ಯದರ್ಶಿ ಸಿ.ಜಿ.ಸೊನ್ನದ ಸ್ವಾಗತಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಎಸ್.ಎಫ್.ಹೊನ್ನಪ್ಪನವರ, ಸಂಘಟನಾ ಕಾರ್ಯದರ್ಶಿ ಈರಣ್ಣ ತಳ್ಳಿಕೇರಿ, ಸಹ ಕಾರ್ಯದರ್ಶಿ ಮಹೇಶ ಆಶಿ, ಮಹಮ್ಮದಹನೀಫ್ ಶೇಖಬಾಯಿ, ನಿರ್ದೇಶಕರಾದ ಬಿ.ವ್ಹಿ.ಅಬ್ಬಿಗೇರಿ, ಎಚ್.ಬಿ.ಜಂಗಣ್ಣವರ, ಲಲಿತಾ ಕುರಹಟ್ಟಿ, ಶರಣಪ್ಪ ಸರ್ವಿ, ವೀರಪ್ಪ ಬಿಂಗಿ, ಶಿವಲೀಲಾ ಬಾವಿಕಟ್ಟಿ, ಕೆ.ಎಸ್.ಹಿರೇಮಠ, ಎ.ಎಂ.ತಹಶೀಲ್ದಾರ, ರಘುನಾಥರೆಡ್ಡಿ ಶೆಟ್ರಡ್ಡಿ, ಬಿ.ಬಿ.ಅರವಟಗಿಮಠ, ಚನ್ನಯ್ಯ ಬಳಗಾನೂರಮಠ, ಎಸ್.ಎಸ್.ವಡ್ಡಿನ, ಬಸನಗೌಡ ಪಾಟೀಲ, ಎಸ್.ಎಂ.ಮಡಿವಾಳರ, ಮೀನಾಕ್ಷಿ ಬದಿ, ಶಂಕರಗೌಡ ಪಾಟೀಲ, ದ್ರಾಕ್ಷಾಯಣಿ ಲಕ್ಕುಂಡಿ ಮುಂತಾದವರಿದ್ದರು.

# 72 ನೇ ಅಖಿಲ ಭಾರತ ಸಹಕಾರ ಸಪ್ತಾಹ : ಸಪ್ತ ವರ್ಣದ ಸಹಕಾರ ಧ್ವಜಾರೋಹಣ

❑ ಸ್ನೇಹಜೀವಿ ನ್ಯೂಸ್

ಗದಗ, ನ. 16 :ಗದಗ ಜಿಲ್ಲಾ ಸಹಕಾರ ಯೂನಿಯನ್ ನಿ.,ಗದಗ ಇದರ ಸಭಾಭವನದಲ್ಲಿ 72 ನೇ ಅಖಿಲ ಭಾರತ ಸಹಕಾರ ಸಪ್ತಾಹ-2025 ಸಪ್ತವರ್ಣದ ಸಹಕಾರ ಧ್ವಜಾರೋಹಣವನ್ನು ಯೂನಿಯನ್ ಅಧ್ಯಕ್ಷ ಸಿ.ಎಂ.ಪಾಟೀಲ ನೆರವೇರಿಸಿ ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಸಹಕಾರ ವಲಯದ ಪಾತ್ರ ಬಹಳ ಮಹತ್ವವನ್ನು ಪಡೆದಿದೆ.

ಸಹಕಾರ ಸಂಸ್ಥೆಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ಕಾರ್ಯದಕ್ಷತೆ ಹಾಗೂ ಪಾರದರ್ಶಕತೆಯನ್ನು ಹೆಚ್ಚಿಸಬಹುದಾಗಿದೆ. ಜೊತೆಗೆ ಕಾಲಕಾಲಕ್ಕೆ ಅವುಗಳ ಉನ್ನತೀಕರಣ ಆಗಬೇಕಿರುವುದು ಇಂದಿನ ಅಗತ್ಯವಾಗಿದೆ ಸಹಕಾರ ಚಳುವಳಿಯ ಅಬಲ ಅಡಿಪಾಯವಾಗಿರುವ ಪ್ಯಾಕ್ಸಗಳನ್ನು ಸಹಕಾರ ಚಳುವಳಿಯನ್ನು ಎತ್ತರಕ್ಕೆ ಕೊಂಡೊಯ್ಯುವ ಪ್ರಮುಖ ಪಾತ್ರವನ್ನು ಸಹಕಾರ ಸಚಿವಾಲಯ ವಹಿಸಿದೆ. ಪ್ಯಾಕ್ಸಗಳ ಬೆಳವಣಿಗೆಗೆ ಮಾದರಿ ಬೈಲಾಗಳನ್ನು ಅಳವಡಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಸಹಕಾರ ಬ್ಯಾಂಕುಗಳಲ್ಲಿ ಹೆಚ್ಚು ವ್ಯವಹರಿಸಿ ಅಭಿವೃದ್ಧಿಪಡಿಸಬೇಕಾಗಿದೆ ಎಂದು ಹೇಳಿದರು.

ಸಹಕಾರ ಇಲಾಖೆ, ಗದಗ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಗದಗ ಜಿಲ್ಲಾ ಸಹಕಾರ ಯೂನಿಯನ್ ನಿ., ಗದಗ, ಕೆ.ಸಿ.ಸಿ. ಬ್ಯಾಂಕ್ ಲಿ., ಧಾರವಾಡ, ಕೆ.ಎಂ.ಎಫ್ ಧಾರವಾಡ, ಗದಗ ಉಪವಿಭಾಗ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಸಂಭಾಪೂರ ಹಾಗೂ ಗದಗ ತಾಲೂಕಿನ ಎಲ್ಲಾ ಸಹಕಾರ ಸಂಘ/ಬ್ಯಾಂಕುಗಳ



ಸಂಯುಕ್ತ ಆಶ್ರಯದಲ್ಲಿ 72 ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ: "ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು" ಅಂಗವಾಗಿ "ಕಾರ್ಯದಕ್ಷತೆ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು" ದಿನದ ಕಾರ್ಯಕ್ರಮವನ್ನು ದುರ್ಗಾದೇವಿ ಸಮುದಾಯಭವನ, ಸಂಭಾಪೂರ ಇದರ ಸಭಾಭವನದಲ್ಲಿ ನೆರವೇರಿಸಲ್ಪಟ್ಟಿತು.

ಸಿ.ಬಿ.ದೊಡ್ಡಗೌಡ್ರ ನಿರ್ದೇಶಕರು, ಕೆ.ಸಿ.ಸಿ. ಬ್ಯಾಂಕ್ ಲಿ., ಧಾರವಾಡ ಇವರು ಉದ್ಘಾಟಿಸಿ ಮಾತನಾಡುತ್ತಾ ಭಾರತದ ಸಹಕಾರ ಚಳವಳಿ ಆರಂಭವಾಗಿ 121 ವರ್ಷಗಳು ಕಳೆದಿವೆ, ಜನತೆಯ ಆರ್ಥಿಕ, ಸಾಮಾಜಿಕ ಬೆಳೆವಣಿಗೆಗೆ ಚಳವಳಿ ಶ್ರಮಿಸುತ್ತಾ ಬಂದಿದೆ, ಗಾತ್ರದಲ್ಲಿ, ವ್ಯಾಪ್ತಿಯಲ್ಲಿ, ಸಾಧನೆಯಲ್ಲಿ ವಿಶ್ವದಲ್ಲೇ ಬೃಹತ್ತಾದುದು, ಮಹತ್ತರವಾದುದು ಆಗಿದೆ. ಜನಸಾಮಾನ್ಯರ ಕಾಮಧೇನು ಕಲ್ಪವೃಕ್ಷ ಎನಿಸಿಕೊಂಡಿದೆ. ಆತ್ಮನಿರ್ಭರ ಭಾರತದ ಗುರಿಯನ್ನು ತಲುಪಲು ಸಹಕಾರ ಸಂಸ್ಥೆಗಳು ವಾಹಕಗಳಾಗಿವೆ, ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿವೆ ಎಂಬ ಭರವಸೆಯನ್ನು ಇರಿಸಿಕೊಳ್ಳಲಾಗಿದೆ. ವಿಶೇಷವಾಗಿ ಕೃಷಿ ಗ್ರಾಮೀಣ ಸಾಲ, ಸಣ್ಣ ಉದ್ಯಮಗಳಾಗಿವೆ, ಸಹಕಾರ ಸಂಸ್ಥೆಗಳು ಆರ್ಥಿಕ ಸ್ವಾವಲಂಬನೆ, ಸುಸ್ತಿರ ಅಭಿವೃದ್ಧಿ, ಸ್ಥಳೀಯ ಸಂಸ್ಥೆಗಳ ಸಬಲೀಕರಣಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿವೆ ಆರ್ಥಿಕವಾಗಿ ಸಬಲರಿದ್ದ ರೈತರು ಸಹಕಾರ ಸಂಘಗಳಲ್ಲಿ ಡಿಪಾಜಿಟ್ ಮಾಡಿದರೆ ಸಂಘವು ಲಾಭಗಳಿಸಿದರೆ ತಮಗೆ ಲಾಭಾಂಶದಲಿ ಡಿವಿಡೆಂಡ್ ದೊರೆಯುವುದು ಅದೇ ನೀವು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಡಿಪಾಜಿಟ್ ಮಾಡಿದರೆ ಲಾಭಾಂಶದಂತ ಯಾವುದೇ ರೀತಿಯ ಸೌಲಭ್ಯಗಳು ದೊರೆಯುವುದಿಲ್ಲಾ ಎಂದು ಹೇಳಿದರು.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕ ಅರವಿಂದ ನಾಗಜ್ಜನವರ ಮಾತನಾಡುತ್ತಾ ಆತ್ಮನಿರ್ಭರ ಭಾರತದ ಗುರಿಯನ್ನು ತಲುಪಲು ಸಹಕಾರ ಸಂಸ್ಥೆಗಳು ವಾಹಕಗಳಾಗಿ ಕೆಲಸ ನಿರ್ವಹಿಸಬೇಕೆಂಬ ಗುರಿಯನ್ನು ಇರಿಸಿಕೊಳ್ಳಲಾಗಿದೆ. ವಿಶೇಷವಾಗಿ ಕೃಷಿ, ಗ್ರಾಮೀಣ ಸಾಲ, ಸಣ್ಣ ಉದ್ಯಮಗಳು, ಮಹಿಳಾ ಸಬಲೀಕರಣ ಮೊದಲಾದವುಗಳನ್ನು ಸಾಧಿಸಲು ಸಹಕಾರ ಸಂಘಗಳು ವಾಹಕಗಳಾಗಿವೆ. ಡಿಜಿಟಲೀಕರಣಕ್ಕೆ ಸತತವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒತ್ತು ನೀಡುತ್ತಾ ಬಂದಿವೆ. ಅಂದರೆ, ಸಹಕಾರಿ ಸಂಘಗಳು ಇತರ ಸಹಕಾರಿ ಸಂಸ್ಥೆಗಳ ನಡುವೆ ಸಂಯೋಜಿಸಲು ಮತ್ತು ಉತ್ತೇಜಿಸಲು ಕಸ್ಟಮೇಜ್ ಮಾಡಿದ ತಾಂತ್ರಿಕ-ಆಧಾರಿತ ನವೀನ ಅಭ್ಯಾಸಗಳು ಮತ್ತು ತಂತ್ರಜ್ಞಾನ ಉನ್ನತೀಕರಣಕ್ಕೆ ರಾಷ್ಟ್ರೀಯ ಸಹಕಾರಿ ದತ್ತಸಂಚಯನವನ್ನು ನಿರ್ಮಾಣ ಮಾಡಲಾಗಿದೆ. ಜಿಇಎಂ ಅಥವಾ ಜೆಮ್ (ಸರ್ಕಾರಿ ಇ-ಮಾರುಕಟ್ಟೆ) ಪೋರ್ಟನಲ್ಲಿ ಸಹಕಾರ ಸಂಘಗಳನ್ನು ಖರೀದಿದಾರರಾಗಿ ಆನ್‌ಬೋರ್ಡ ಮಾಡುವುದು, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ (ಎಆರ್‌ಡಿಬಿಗಳು), ಕೇಂದ್ರಿಯ ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಗಣಕೀಕರಣ ಮತ್ತು ರಾಜ್ಯಗಳ ಕೇಂದ್ರಾಡಳಿತ ಪ್ರದೇಶಗಳ ನಿಬಂಧಕರ ಕಚೇರಿಗಳ ಗಣಕೀಕರಣಕ್ಕಾಗಿ ಯೋಜನೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಾಗಿ ಈ ಸೇವೆಗಳಿಗೆ ಅವಕಾಶ ಸೇರಿದಂತೆ ಇತ್ಯಾದಿಗಳು ಕೇಂದ್ರ ಸಹಕಾರ ಸಚಿವಾಲಯದ ಮಾರ್ಗದರ್ಶನದಲ್ಲಿ ಕೆಲವು ಪ್ರಮುಖ ಡಿಜಿಟಲ್ ಸಿಧಾರನಾ ಯೋಜನೆಗಳು ಚಾಲ್ತಿಯಲ್ಲಿವೆ ಎಂದು ಹೇಳಿದರು.

ಹಾಲು ಉತ್ಪಾದಕರ ಸಹಕಾರ ಸಂಘ ನಿ., ಸಂಭಾಪೂರ ಇದರ ಅಧ್ಯಕ್ಷ ಗೋವಿಂದಪ್ಪ ನಾಗನೂರ ಸಹಕಾರ ಸಂಘಗಳ ಉಪನಿಬಂಧಕಿಯರಾದ ಶ್ರೀಮತಿ ಎಸ್.ಎಸ್.ಕಬಾಡೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮತಿ ಪುಷ್ಪಾ ಕೆ. ಕಡಿವಾಳ, ಗದಗ ಜಿಲ್ಲಾ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಶಾಂತಾ ಎಚ್.ಎಂ, ಎಸ್.ಎಂ.ಚಿಕ್ಕಮಠ, ಎಂ.ಬಿ.ಚಳಗೇರಿ, ಸುರೇಶಕುಮಾರ ಎಸ್. ಸಹಾಯಕ ವ್ಯವಸ್ಥಾಪಕರು, ಉಪಸ್ಥಿತರಿದ್ದರು.

ಸಹಕಾರ ಸಪ್ತಾಹದ ಮೊದಲನೇ ದಿನದ ವಿಷಯ "ಕಾರ್ಯದಕ್ಷತೆ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು" ಕುರಿತು, ವ್ಹಿ.ಜಿ.ಕುಲಕರ್ಣಿ, ವಿಶ್ರಾಂತ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಧಾರವಾಡ ಇವರು ಉಪನ್ಯಾಸ ನೀಡಿದರು. ಅಮರಿನ್ ತಪಾಲ ಹಾಗೂ ಸಂಗಡಿಗರು, ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ, ಸಂಭಾಪೂರ ಇದರ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು, ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ ಕರಿಯಪ್ಪನವರ ಸ್ವಾಗತಿಸಿ ನಿರೂಪಿಸಿದರು. ಜಿ.ಬಿ.ಬೆಣಕಲ್ ಮುಖ್ಯ ಕಾರ್ಯನಿರ್ವಾಹಕ ಪಿ.ಕೆ.ಪಿ.ಎಸ್. ಸಂಭಾಪೂರ ವಂದಿಸಿದರು.ಐ

# ವಿದ್ಯಾರ್ಥಿಗಳ ಯಶಸ್ಸಿಗೆ ದಿನಚರಿ ಬಹುಮುಖ್ಯ



❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ವಿದ್ಯಾರ್ಥಿಗಳು ಒತ್ತಡ ನಿರ್ವಹಣೆ, ಆರೋಗ್ಯ ರಕ್ಷಣೆ, ಸಮಯ ನಿರ್ವಹಣೆ, ಏಕಾಗ್ರತೆ ಕೌಶಲ್ಯಗಳನ್ನು ಸರಿಯಾಗಿ ಅಳವಡಿಸಿಕೊಳ್ಳಲು ವ್ಯವಸ್ಥಿತ ದಿನಚರಿ ಹೊಂದುವುದು ಅವಶ್ಯವಿದ್ದು, ಸಮಯವನ್ನು ಉತ್ತಮವಾಗಿ ಬಳಸಿಕೊಂಡರೆ ಬದುಕಿನಲ್ಲಿ ಯಶಸ್ಸು ಪಡೆಯಲು ಸಾಧ್ಯವೆಂದು ಹಳಿಯಾಳ ತಾಲ್ಲೂಕಿನ ಕೆ.ಕೆ. ಹಳ್ಳಿಯ ಅಭಿನವ ಸಿದ್ಧಾನಂದ ಸ್ವಾಮೀಜಿ ಹೇಳಿದರು. ಅವರು ಹುಲಕೋಟಿಯ ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕವು ಆಯೋಜಿಸಿದ್ದ 'ಒತ್ತಡ ನಿರ್ವಹಣೆಗೆ ಉತ್ತಮ ದಿನಚರಿ ಅಗತ್ಯ' ಕಾರ್ಯಕ್ರಮದಲ್ಲಿ ಮಾತನಾಡುತ್ತ, ವಿದ್ಯಾರ್ಥಿಗಳು ಪರಿಶ್ರಮದಿಂದ ಅಧ್ಯಯನ ಮಾಡುತ್ತ ಗುರಿಯನ್ನು ತಲುಪಲು ನಿರಂತರ ಪ್ರಾಮಾಣಿಕ ಪ್ರಯತ್ನ, ಸಕಾರಾತ್ಮಕ ದೃಷ್ಟಿಕೋನ, ಗುರುಹಿರಿಯರ ಮಾರ್ಗದರ್ಶನ, ಸರಿಯಾದ ನಿರ್ಧಾರಗಳಿಂದ ಸವಾಲುಗಳನ್ನು ಸಮತಾಭಾವದಿಂದ ಎದರಿಸುವ ಕಲೆಯನ್ನು ಸಿದ್ಧಿಸಿಕೊಂಡಂರೆ ಅವಕಾಶಗಳು ಹುಡುಕಿಕೊಂಡು ಬರುತ್ತವೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಪ್ರೊ. ಸುಧಾ ಕೌಜಗೇರಿ ವಿದ್ಯಾರ್ಥಿಗಳು ಸಮಯದ ಬೆನ್ನಹತ್ತದೆ ಅದನ್ನು ದುಡಿಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಲು ಉತ್ತಮ ದಿನಚರಿ ಹೊಂದುವುದು ಅಗತ್ಯವೆಂದು ಹೇಳಿದರು. ಎನ್.ಎಸ್.ಎಸ್. ಘಟಕದ ಕಾರ್ಯಕ್ರಮ ಅಧಿಕಾರಿ ಪ್ರೊ. ಅಪ್ಪಣ್ಣ ಹಂಜೆ ವಿದ್ಯಾರ್ಥಿಗಳಿಗೆ ಗುರು, ಗುರಿ, ಛಲ ಯಶಸ್ಸಿನ ಸೂತ್ರಗಳಾಗಿದ್ದು, ಶರೀರ ಮತ್ತು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಸಮಯ ನಿರ್ವಹಣೆ ಕಲೆಯನ್ನು ಮೈಗೂಡಿಸಿಕೊಂಡರೆ ಯಶಸ್ಸು ಕಣ್ಮುಂದೆ ಬಂದು ನಿಲ್ಲತ್ತದೆಂದು ಹೇಳಿದರು. ಸಾಂಸ್ಕೃತಿಕ ವಿಭಾಗದ ಸಂಯೋಜಕ ರಮೇಶ ಹುಲಕುಂದ ಕಾರ್ಯಕ್ರಮ ನಡೆಸಿಕೊಟ್ಟರು. ಕ್ರೀಡಾ ವಿಭಾಗದ ಮಹಾಂತೇಶ ವಂದನಾರ್ಪಣೆಗೈದರು. ಸ್ವಾಮೀಜಿ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಕಾರ್ಯಕ್ರಮದಲ್ಲಿ ಬೋಧಕರು, ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.

## ಪ್ರಾಥಮಿಕ ಆರೋಗ್ಯ ಕೇಂದ್ರ ಲಕ್ಕುಂಡಿಯಲ್ಲಿ

# ವಿಶ್ವ ಮಧುಮೇಹ ದಿನಾಚರಣೆ

❑ ಸ್ನೇಹಜೀವಿ ನ್ಯೂಸ್

ಗದಗ, ನ. 16 : ಇಂದು ಒತ್ತಡದ ಜೀವನದಲ್ಲಿ ಪ್ರತಿಯೊಬ್ಬರಲ್ಲಿ ಮಧುಮೇಹ ಮತ್ತು ಅಧಿಕರಕ್ತದೊತ್ತಡ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿ ಉಲ್ಬಣಗೊಂಡು ಜನರು ಆರೋಗ್ಯ ಹಧಗೆಡುತ್ತಿರುವುದರಿಂದ 30 ವರ್ಷ ಮೇಲ್ಪಟ್ಟಂತ ಎಲ್ಲರೂ ಟೈಪ್ 2 ತಡೆಗಟ್ಟಮಬಹುದು ಆದರೆ ಟೈಪ್1 ಮಧುಮೇಹವನ್ನು ತಡೆಗಟ್ಟಲು ಸಾಧ್ಯವಿಲ್ಲ ಆದರೆ ಇನ್ಸೂಲಿನ ನಿರ್ವಹಣೆ ಮಾಡಬಹುದು ಆದ್ದರಿಂದ ಪ್ರತಿಯೋಬ್ಬರು ತಮ್ಮ ಜೀವನಶೈಲಿಯನ್ನು ಬದಲಾಣೆ ಮಾಡಿಕೊಳ್ಳುವುದು ಮತ್ತು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುರಿಂದ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ತಡೆಗಟ್ಟಲು ಸಾಧ್ಯ ಎಂದು ಲಕ್ಕುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾರಾದ ಡಾ.ಶರ್ಮಿಳಾ ಹೇಳಿದರು.

ಅವರು ಕರ್ನಾಟಕ ಸರ್ಕಾರ ಜಿಲ್ಲಾಢಳಿತ ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೆ.ಹೆಚ್.ಪಾಟೀಲ್ ವೈಧ್ಯಕೀಯ ವಿಜ್ಞಾನ ಸಂಸ್ಥೆ ಜಿಮ್ಸ್ ಗದಗ, ಪ್ರಾಥಮಿಕ ಆರೋಗ್ಯ ಕೇಂದ್ರ ಲಕ್ಕುಂಡಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾದ ನ.14 ವಿಶ್ವ ಮಧುಮೇಹ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಇಂದು ಅಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಸರ್ಕಾರವು ಎನ್.ಸಿ.ಡಿ ಕಾರ್ಯಕ್ರಮಗಳ ಮೂಲಕ ಮಧುಮೇಹ, ಅಧಿಕರಕ್ತದೊತ್ತಡ ಕ್ಯಾನ್ಸರ್ ಪಾರ್ಶ್ವವಾಯು ಮುಂತಾದ ರೋಗವನ್ನು ಪರೀಕ್ಷೆ ಮಾಡಲಾಗುತ್ತಿದ್ದು ಮತ್ತು ಮಧುಮೇಹಿಗಳು ಸಕ್ಕರೆ, ಕರೀದ ಪದಾರ್ಥಗಳನ್ನು ಸೇವಿಸಲೇಭಾರದು, ಪ್ರತಿ ತಿಂಗಳು ತಮ್ಮ ಆರೋಗ್ಯ ತಪಾಸಣೆಯನ್ನು ತಪ್ಪದೆ ಮಾಡಿಸಿಕೊಳ್ಳಬೇಕು, ವ್ಯಾಯಾಮ,ವಾಕಿಂಗ್ ಮೂಲಕ ಮಧುಮೇಹ ಮತ್ತು ಅಧಿಕರಕ್ತದೊತ್ತಡವನ್ನು ನಿಯಂತ್ರಣ ಮಾಡಿಕೊಳ್ಳಬೇಕು ಎಂದು ಹೇಳಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಸಿದ್ದಪ್ಪ ಎನ್ ಲಿಂಗದಾಳ ಮಾತನಾಡಿ ಎನ್.ಸಿ ಡಿ ಕಾರ್ಯಕ್ರಮದ ಅಧಿಕರಕ್ತದೊತ್ತಡ ನಿಯಂತ್ರಣಕ್ಕೆ ಉಚಿತ ಆರೋಗ್ಯ ತಪಾಸಣೆ ಮತ್ತು ವೈದ್ಯಕಿಯ ಔಷದೋಪಚಾರ ಗೃಹ ಆರೋಗ್ಯ ಯೋಜನೆಯ ಮೂಲಕ ಮಾಡಲಾಗುತ್ತಿದ್ದ ಸದುಪಯೋಗವನ್ನು ಪಡೆಯಬೇಕು, ತಂಬಾಕು ಗುಟಕಾ ಮದ್ಯಸೇವೆ ಆರೋಗ್ಯಕ್ಕೆ ಹಾನಿಕರವಾಗಿದ್ದು ಅವುಗಳಿಂದ ದೂರವಿರಿ ಮತ್ತು ಪೌಷ್ಠಿಕ ಆಹಾರಗಳ ಸೇವನೆ ಯೋಗ ವ್ಯಾಯಾಮ ದಿನನಿತ್ಯದ ನಿಮ್ಮ ಜೀವನದಲ್ಲಿ ರೂಡಿಸಿಕೊಂಡು ಆರೋಗ್ಯ ಸಂಪತ್ತನ್ನು ಪಡೆಯಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮಧುಮೇಹ ನಿಯಂತ್ರಣ ಕುರಿತು ಉಪನ್ಯಾಸವನ್ನು ಡಾ.ಶ್ರಾವಣಿ, ಡಾ.ಸಿದ್ದಾರ್ಥಡಾ.ಶ್ರೀಕಾಂತ ನೀಡಿದರು ಅಧ್ಯಕ್ಷತೆಯನ್ನು ಡಾ.ವರ್ಷಾ ಬ್ಯಾಲಿಹಾಳ ವಹಿಸಿದ್ದರು. ಪ್ರಾಸ್ಥಾವಿಕವಾಗಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಾಯ್.ಎನ್ ಕಡೇಮನಿ ಮಾತನಾಡಿದರು ಕಾರ್ಯಕ್ರಮದಲ್ಲಿ ಪ್ರಯೋಗಶಾಲಾ ತಂತ್ರಜ್ಞರಾದ ವಂದನಾ ಠಾಕೂರ ಶುಶ್ರೂಷಣಾಧಿಕಾರಿ ಆರೀಪಾ ಕಿರಟಗೇರಿ ನೇತ್ರಾಧಿಕಾರಿ ಕೋಡೆಕಲ್ಲ್ ಸಂಗೀತಾ ಕುಲಕರ್ಣಿ ಶಶಿಕಲಾ ಹಡಪದ ಪಾರ್ವತಿ ವಜ್ರಮಟ್ಟಿ ಸವಿತಾ ಬಣವಿ ಸಲ್ಮಾ ಕುಕನೂರ ಸೇರಿದಂತೆ ಗ್ರಾಮದ ಇತರರು ಉಪಸ್ಥಿತರಿದ್ದರು

## ಧರ್ಮಸ್ಥಳ ಕೇಸ್‌ಗೆ ಬಿಗ್ ಟ್ವಿಸ್ಟ್; ಎಸ್‌ಐಟಿ ಅಧಿಕಾರಿಗಳ ವಿರುದ್ಧವೇ ಜೀವ ಬೆದರಿಕೆ ದೂರು ಕೊಟ್ಟಿದ್ಯಾರು?

❑ ಸ್ನೇಹಜೀವಿ ನ್ಯೂಸ್

ಮಂಗಳೂರು ನ.16): ಧರ್ಮಸ್ಥಳದಲ್ಲಿ ಶವಗಳನ್ನ ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ನಡೆಸುತ್ತಿದೆ. ಕೇಸ್ ಕುರಿತ ತನಿಖೆ ನಿರ್ಣಾಯಕ ಹಂತ ತಲುಪಿದೆ ಎನ್ನಲಾಗ್ತಿದೆ. ಇದೇ ವೇಳೆ ಕೆಲ ಮಹತ್ವದ ಬೆಳಣಿಗೆಗಳು ಕೂಡ ನಡೆಯುತ್ತಿದೆ. ಎಸ್‌ಐಟಿ ಅಧಿಕಾರಿಗಳು ವಿರುದ್ಧವೇ ಜೀವ ಬೆದರಿಕೆ ಕೇಸ್ ದಾಖಲಾಗಿದೆ. ದೂರು ಕೊಟ್ಟವರು ಯಾರು?



ಧರ್ಮಸ್ಥಳ ಕೇಸ್‌ಗೆ ಟ್ವಿಸ್ಟ್ ಮೇಲೆ ಟ್ವಿಸ್ಟ್:ಧರ್ಮಸ್ಥಳ ಶವ ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರ ಚಿನ್ನಯ್ಯನನ್ನು ಬಂಧಿಸಿದ ಪೊಲೀಸರು ವಿಚಾರಣೆ ಬಳಿಕ ಶಿವಮೊಗ್ಗ ಜೈಲಿನಲ್ಲಿ ಇರಿಸಿದ್ದಾರೆ. ಚಿನ್ನಯ್ಯ ಜೊತೆ ಸಂಪರ್ಕದಲ್ಲಿದ್ದರು ಎನ್ನುವ ಕಾರಣಕ್ಕೆ ಮಹೇಶ್ ತಿಮರೋಡಿ ಶೆಟ್ಟಿ, ಗಿರೀಶ್ ಮಟ್ಟಣ್ಣನವರ್ , ಟಿ ಜಯಂತ್ ಸೇರಿದಂತೆ ಅನೇಕರನ್ನ ವಿಚಾರಣೆ ನಡೆಸಲಾಗಿತ್ತು. ಆದ್ರೆ ಇದೀಗ ಎಸ್‌ಐಟಿ ವಿರುದ್ಧವೇ ದೂರು ನೀಡಿದ್ದಾರೆ.

ಎಸ್‌ಐಟಿ ಅಧಿಕಾರಿಗಳ ವಿರುದ್ಧವೇ ದೂರು:ಪದೇ ಪದೇ ತನಿಖೆಗೆ ಹಾಜರಾಗುವಂತೆ ನೋಟಿಸ್ ನೀಡ್ತಿದ್ದ ಎಸ್‌ಐಟಿಅಧಿಕಾರಿಗಳ ವಿರುದ್ಧವೇ ಸೌಜನ್ಯ ಪರ ಹೋರಾಟಗಾರ ಹಾಗೂ ಸಾಮಾಜಿಕ ಕಾರ್ಯಕರ್ತ ಜಯಂತ್ ಟಿ ದೂರು ನೀಡಿದ್ದಾರೆ. ಎಸ್‌ಐಟಿ ಅಧಿಕಾರಿಗಳಾದ ಜಿತೇಂದ್ರ ದಯಾಮ, ಎಸ್.ಪಿ. ಸೈಮನ್, ಡಿವೈಎಸ್ಪಿ ಆರ್ ಜಿ. ಮಂಜುನಾಥ, ಇನ್ಸೆಕ್ಟರ್ ಮಂಜುನಾಥ ಗೌಡ, ಸಬ್ ಇನ್‌ಸ್ಪೆಕ್ಟರ್ ಗುಣಪಾಲ್ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪ್ರಾಣ ಬೆದರಿಕೆ ದೂರು ಕೊಟ್ಟ ಜಯಂತ್ :ಎಸ್‌ಐಟಿ ವಿರುದ್ಧವೇ ಜಯಂತ್ ಟಿ. ಗಂಭೀರ ಆರೋಪ ಮಾಡಿದ್ದಾರೆ. ಪ್ರಕರಣ–ಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಎಸ್‌ಐಟಿ ಅಧಿಕಾರಿಗಳು ದೈಹಿಕ ಹಲ್ಲೆ, ಪ್ರಾಣ ಬೆದರಿಕೆಯೊಡ್ಡಿದ್ದಾರೆ. ಅಲ್ಲದೇ ಅಪರಾಧಿಕ ಪಿತೂರಿ, ಸುಳ್ಳು ಸಾಕ್ಷಿ ಹೇಳುವಂತೆ ಒತ್ತಾಯ ಹೇರಿದ್ದಾರೆ ಎಂದು ಜಯಂತ್ ದೂರಿನ ಮೂಲಕ ಆರೋಪ ಮಾಡಿದ್ದಾರೆ ಎನ್ನಲಾಗ್ತಿದೆ.

**ಅಧಿಕಾರಿಗಳಿಂದಲೇ ಕರ್ತವ್ಯ ನಿರ್ಲಕ್ಷ್ಯ:–** ಎಸ್‌ಐಟಿ ಅಧಿಕಾರಿಗಳು ವಿಚಾರಣೆ ವೇಳೆ ಸುಳ್ಳು ಸಾಕ್ಷಿ ಹೇಳುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಜಯಂತ್ ಆರೋಪ ಮಾಡ್ತಿದ್ದಾರೆ. ಕಾನೂನು ಬಾಹಿರ ಕೃತ್ಯಗಳು, ಸರಕಾರಿ ಆದೇಶ ಪಾಲನೆ ಮಾಡದೆ ಅಧಿಕಾರಿಗಳೇ ಕರ್ತವ್ಯ ನಿರ್ಲಕ್ಷ್ಯ ತೋರಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖವಾಗಿದೆ.









Snehajeevi Kannada Daily, Printed and Published and owned by ABDULHAMEED SHALAGAR House No. 6421 Rajput Oni, Betageri-Gadag, State : Karnataka
Editor : ABDULHAMEED SHALAGAR, Printed at : Prabhu Graphics, 3094A, Station Road Gadag, District Gadag 582 101 State : Karnataka